ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ರವರ ಕಛೇರಿ, ಪಾಲಿಕೆಯ ಮುಖ್ಯ ಕಛೇರಿಗಳು, ನರಸಿಂಹರಾಜ ಚೌಕ, ಬೆಂಗಳೂರು-560002

ಸಂಖ್ಯೆ:ಬಿಬಿಎಂಪಿ/ಆಯುಕ್ತರು/ಪಿ.ಆರ್/ /2020-21 ದಿನಾಂಕ:26/03/2021

-:: ಕಛೇರಿ ಆದೇಶ ::-

ವಿಷಯ: ಪಾಲಿಕೆ ಅನುದಾನದಲ್ಲಿ ನಿರ್ವಹಿಸಿದ ಕಾಮಗಾರಿ ಬಿಲ್ಲುಗಳನ್ನು ಪಾವತಿಸುವ ಮುನ್ನಾ ಸ್ಥಳ ಪರಿಶೀಲನೆ ಮಾಡುವ ಬಗ್ಗೆ.

ಉಲ್ಲೇಖ 1.ಆಯುಕ್ತರು ರವರ ಕಛೇರಿ ಸಂಖ್ಯೆ:/ಪಿಆರ್/E-8455/2020-21, ದಿನಾಂಕ: 28/01/2021.

2.ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾರ್ಯನಿರತ ಗುತ್ತಿಗೆದಾರರ ಸಂಘ (ರಿ) ರವರ ಮನವಿ ಪತ್ರ ದಿನಾಂಕ:18/03/2021.

--*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆದಾರರು ನಿರ್ವಹಿಸಿದ ಕಾಮಗಾರಿ ಬಿಲ್ಲುಗಳನ್ನು IFMS ತಂತ್ರಾಂಶದ Work Bill Module ಮೂಲಕ ಪಾವತಿ ಮಾಡಲಾಗುತ್ತಿರುತ್ತದೆ. ಪಾಲಿಕೆ ಅನುದಾನದಲ್ಲಿ ನಿರ್ವಹಿಸಿದ ಕಾಮಗಾರಿಗಳಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಅಂತರ್ಜಾಲದಲ್ಲಿ ಕಾಮಗಾರಿ ಬಿಲ್ಲುಗಳನ್ನು ಸಾರ್ವಜನಿಕರು ವೀಕ್ಷಿಸಿ, ಸದರಿ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿ ಮಾಡುವ ಮುನ್ನಾ ಕಾಮಗಾರಿ ಸ್ಥಳ ಪರಶೀಲನೆ ನಡೆಸಿ Visual Measurements ಗಳನ್ನು ಪರಿಶೀಲಿಸಿದ ನಂತರದಲ್ಲಿ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿ ಮಾಡುವ ಬಗ್ಗೆ ಉಲ್ಲೇಖ (1) ರ ಪತ್ರದಲ್ಲಿ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುದಾನದಿಂದ ನಿರ್ವಹಿಸಿದ ಕಾಮಗಾರಿ ಬಿಲ್ಲಿಗೆ ಸಂಬಂಧಿಸಿದಂತೆ, ಎಲ್ಲಾ ಕಾಮಗಾರಿ ಬಿಲ್ಲುಗಳನ್ನು ಪರಿಶೀಲಿಸಿ, ವರದಿ ನೀಡಲು ಮುಖ್ಯ ಅಭಿಯಂತರರು (ಟಿ.ಎ.ಸಿ.ಸಿ) ರವರಿಗೆ ದಿನಾಂಕ:12/01/2021 ರಂದು ನೀಡಿದ ಆದೇಶವನ್ನು ಮಾರ್ಪಡಿಸಿ ಪ್ರಗತಿಯಲ್ಲಿರುವ ಕಾಮಗಾರಿಗಳಲ್ಲಿ (Ongoing Works) ದಿನಾಂಕ:01/02/2021 ರ ನಂತರ ವಿಭಾಗೀಯ ಕಾರ್ಯಪಾಲಕ ಅಭಿಯಂತರುಗಳಿಂದ BR ನಮೂದಿಸಿ, TVCCಗೆ ಸಲ್ಲಿಸುವ ಪಾಲಿಕೆ ಅನುದಾನದ ಕಾಮಗಾರಿ ಬಿಲ್ಲುಗಳನ್ನು ಮಾತ್ರ ಕಾಮಗಾರಿಗಳ ಗುಣಮಟ್ಟ ಪರಿಮಾಣವನ್ನು ಅಳತೆ ಪುಸ್ತಕದೊಂದಿಗೆ ತಾಳೆ ಮಾಡಿ, Visual Measurements ಸ್ಥಳ ಪರಿಶೀಲಿಸಿ, ವರದಿಸಲು ಹಾಗೂ ಸಾರ್ವಜನಿಕರು ವೀಕ್ಷಿಸಿ, ಪ್ರತಿಕ್ರಿಯಿಸಿ, ಸಲ್ಲಿಸುವ ದೂರುಗಳಿಗೆ ಸಂಬಂಧಿಸಿದಂತೆ ಕಾಮಗಾರಿ ಸ್ಥಳ ಪರಿಶೀಲಿಸಿ, ವರದಿ ನೀಡಲು ಮುಖ್ಯ ಅಭಿಯಂತರರು (ಟಿವಿಸಿಸಿ) ರವರಿಗೆ ಆದೇಶಿಸಲಾಗಿರುತ್ತದೆ".

ಈ ಸಂಬಂಧವಾಗಿ ಉಲ್ಲೇಖ (2) ರನ್ವಯ ಅಧ್ಯಕ್ಷರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾರ್ಯನಿರತ ಗುತ್ತಿಗೆದಾರರ ಸಂಘ (ರಿ) ರವರ ದಿನಾಂಕ:18/03/2021 ರಂದು ಮಾನ್ಯ ಆಯುಕ್ತರು ರವರಿಗೆ ಪತ್ರ ನೀಡಿ 27 ತಿಂಗಳುಗಳಿಂದ ಬಿಲ್ಲುಗಳು ಬಾಕಿ ಇದ್ದು, ಆರ್ಥಿಕ ಸಂಕಷ್ಟದಲ್ಲಿದ್ದೇವೆಯೆಂದು ತಿಳಿಸಿ, ಟಿ.ಎ.ಸಿ.ಸಿ ಸ್ಥಳ ಪರಿಶೀಲನೆಗೆ ಒಳಪಡಿಸಿದರೆ ತಿಂಗಳಾನುಗಟ್ಟಲೆ ಕಾಲ ವಿಳಂಭವಾಗಿ ಗುತ್ತಿಗೆ ಹಣದ ಬಿಡುಗಡೆಯ ವಿಳಂಭವಾಗುವ ಸಂಬವ ವಿರುವುದರಿಂದ ಗುತ್ತಿಗೆದಾರರ ಆರ್ಥಿಕ ಹಿತದೃಷ್ಟಯನ್ನು ಗಮನದಲ್ಲಿರಿಸಿಕೊಂಡು ಉಲ್ಲೇಖ (1) ರ ಆದೇಶವನ್ನು ರದ್ದುಪಡಿಸಿ, ಹಿಂದಿನಂತೆ ಯಥಾಸ್ಥಿತಿಯನ್ನು ಮುಂದುವರೆಸುವಂತೆ ಮನವಿ ಮಾಡಿಕೊಂಡಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಗುತ್ತಿಗೆದಾರರ ಮನವಿಯನ್ನು ಪರಿಶೀಲಿಸಿ, ಮನವಿಯನ್ನು ಪರಿಗಣಿಸಿ, ಮೇಲ್ಕಂಡ ಉಲ್ಲೇಖ (1) ರ ಆದೇಶವನ್ನು ರದ್ದುಪಡಿಸಿ, ಹಿಂದಿನ ಯಥಾಸ್ಥಿತಿಯನ್ನು ಮುಂದುವರೆಸಿ ಆದೇಶಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
26/2/2021

ಪ್ರತಿಯನ್ನು :-

1.ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.

.....2/-

Scanned with CamScanner